ಆ. ಇಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಹೌದು.

ರಾಜ್ಯ ರಸ್ತೆ ಸಾರಿಗೆಯ ಮಂಗಳೂರು ವಿಭಾಗದಲ್ಲಿ ಸಿಬ್ಬಂದಿಗಳ ಕೊರತೆ.

535 (922): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):–

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗದಲ್ಲಿ ಎಷ್ಟು ಕಾರ್ಮಿಕರ ಮತ್ತು ಎಷ್ಟು ತಾಂತ್ರಿಕ ಸಿಬ್ಬಂದಿಗಳ ಕೊರತೆ ಇದೇ;

ಆ. ಈ ಕೊರತೆಯನ್ನು ನೀಗಿಸಿ, ಸಿಬ್ಬಂದಿಗಳ ನೇಮಕ ಯಾವಾಗ ಮಾಡಲಾಗುವುದು;

ಇ. ಈ ವಿಭಾಗದಲ್ಲಿ ತಾತ್ಕಾಲಿಕ ನೆಲೆಯಲ್ಲಿ ನೇಮಕ ಮಾಡಿದ ಚಾಲಕರೆಷ್ಟು, ಕಂಡಕ್ಟರ್‌ಗಳೆಷ್ಟು;

ಈ. ಇವರನ್ನು ಖಾಯಂ ಮಾಡಲಾಗುವುದೇ;

ಉ. ಸಿಬ್ಬಂದಿಗಳ ಕೊರತೆ ಎಂಬ ಕಾರಣದಿಂದಾಗಿ ಇಲ್ಲಿನ ದಿನನಿತ್ಯದ ಸಾರಿಗೆ ವ್ಯವಸ್ಥೆಗೆ ತೊಂದರೆಯಾಗದಂತೆ ಮಾಡುವ ಕಾರ್ಯಕೈಗೊಳ್ಳಲಾಗುವುದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ.	ತಾಂತ್ರಿಕ ಸಿಬ್ಬಂದಿ	134
	ಇತರೆ ಸಿಬ್ಬಂದಿ	332

ಆ. ಸಾಧ್ಯವಾದಷ್ಟು ಶೀಘ್ರದಲ್ಲಿ

ಇ. 180 ಚಾಲಕರು ಮತ್ತು 178 ನಿರ್ವಾಹಕರುಗಳನ್ನು ಈ ವಿಭಾಗದಲ್ಲಿ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ.

ಈ. ಈ ಚಾಲಕ ನಿರ್ವಾಹಕರುಗಳನ್ನು ಪದವ್ಯಂದ ಮತ್ತು ನೇಮಕಾತಿಯ ನಿಯಮಾವಳಿಯಂತೆ ತಾತ್ಕಾಲಿಕವಾಗಿ 90 ದಿನಗಳಿಗೆ ನೇಮಿಸಿಕೊಳ್ಳಲಾಗಿದೆ. ಆದಾಗ್ಯೂ ಈ ನೇಮಕಾತಿ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇದ್ದು ಆದು ಇನ್ನು ಇತ್ಯರ್ಥವಾಗಿರುವುದಿಲ್ಲ.

ಉ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಹಾಗೂ ಒಳ್ಳೆಯ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲು ಮತ್ತು ದಿನನಿತ್ಯದ ಸಾರಿಗೆ ಸಂಚಾರಕ್ಕಾಗಿ 100 ಚಾಲಕ ನಿರ್ವಾಹಕರುಗಳನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ. ಸಧ್ಯಕ್ಕೆ ಚಾಲಕ ನಿರ್ವಾಹಕರುಗಳ ಕೊರತೆ ಮಂಗಳೂರು ವಿಭಾಗದಲ್ಲಿ ಇರುವುದಿಲ್ಲ. ಆದರೆ ಬೇರೆ ಸಿಬ್ಬಂದಿಗಳ ಕೊರತೆ ಇದ್ದರೂ ಸಹ ಸಾರ್ವಜನಿಕರಿಗೆ ಸಾರಿಗೆ ವ್ಯವಸ್ಥೆಯನ್ನು ಉತ್ತಮವಾಗಿ ನೀಡಲಾಗುತ್ತಿದೆ.

ರಾಜ್ಯದಲ್ಲಿ ವರದಕ್ಷಿಣೆಯ ಸಾವುಗಳ ಸಂಖ್ಯೆ.

536 (13): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ 1992ನೇ ಡಿಸೆಂಬರ್ ಅಖ್ಯೆರ್ ವರೆಗೆ ಆಗಿರುವ ವರದಕ್ಷಿಣೆಯ ಸಾವುಗಳೆಷ್ಟು (ವರ್ಷಾವಾರು ವಿವರ ನೀಡುವುದು);

ಆ. ನ್ಯಾಯಾಲಯಗಳಲ್ಲಿ ಹೂಡಲಾದ ಮೊಕದ್ದಮೆಗಳ ಸಂಖ್ಯೆ ಎಷ್ಟು: ಹಾಗೂ ಅಂತಹ ಎಷ್ಟು ಮೊಕದ್ದಮೆಗಳು ದಾವೆಗೆ ಬಾಕಿ ಇವೆ;

ಇ. ಈ ಬಾಬ್ತು ಶಿಕ್ಷೆಗೆ ಒಳಗಾದ ಒಟ್ಟು ಸಂಖ್ಯೆ ಎಷ್ಟು ?

(ಅದು ಎಲ್ಲೆಲ್ಲಿ, ಯಾರ್ಯಾರು ಹಾಗೂ ವಿವರ ನೀಡುವುದು) ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ. 664 ವರದಕ್ಷಿಣೆ ಸಾವುಗಳು.

ವರ್ಷ	ಸಂಖ್ಯೆ
1990	– 228
1991	– 227
1992	– 209

(31.12.92ರ ವರೆಗೆ)

ಆ. ನ್ಯಾಯಾಲಯಗಳಲ್ಲಿ ಹೂಡಲಾದ ಮೊಕದ್ದಮೆಗಳ ಸಂಖ್ಯೆ: 299. ಯಾವುದೇ ಮೊಕದ್ದಮೆಗಳು ದಾವೆಗೆ ಬಾಕಿ ಉಳಿದಿರುವುದಿಲ್ಲ.

ಇ. 4 ಜನ ಶಿಕ್ಷೆಗೆ ಒಳಗಾಗಿದ್ದಾರೆ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಜಿಲ್ಲೆ: ಪೋ. ಠಾಣೆ: ಮೊಕದ್ದಮೆ ಸಂಖ್ಯೆ: ಕಾನೂನು ಪ್ರಕರಣ	ಸಂಕ್ಷಿಪ್ತ ಸಾರಾಂಶ	ಮೃತಳ ಹೆಸರು ವಯಸ್ಸು ಘಟನೆಯ ದಿನಾಂಕ ಸಾವಿನ ರೀತಿ	ಆರೋಪಿತರ ಹೆಸರು ಮತ್ತು ಸಂಬಂಧ	ಫಿರ್ಯಾದಿಯ ಹೆಸರು	ಶಿಕ್ಷೆಯ ವಿವರ
2	3	4	5	6	7
ಬೆಂಗಳೂರು ನಗರ ಗಿರಿನಗರ ಪೊಲೀಸ್ ಠಾಣೆ 125:89 ಕಲಂ 498 (ಎ) 306 ಐ.ಪಿ.ಸಿ.	ಈ ಪ್ರಕರಣವು ಶ್ರೀಮತಿ ಸುನಿತಾ ಎಂಬುವವಳ ವರದಕ್ಷಿಣೆ ಸಾವಿಗೆ ಸಂಬಂಧಿಸಿ ದ್ದಾಗಿರುತ್ತದೆ.	ಸುನಿತ 20 ವರ್ಷ, 9.12.1989 ಸುಟ್ಟ ಗಾಯಗಳಿಂದ	1. ಹರಿರಾಮ ಗಂಡ 2. ರಾಧಮ್ಮ ನಾದಿನಿ 3. ಸೀನಪ್ಪ ಭಾವ 4. ರಾಜಮ್ಮ ಅತ್ತೆ	ಶ್ರೀಮತಿ ಸುನಿತ (ಮೃತಳು)	ದಿನಾಂಕ 2.11.91ರಂದು ಬೆಂಗಳೂರು ನಗರದ 22ನೇ ಸತ್ರ ನ್ಯಾಯಾಲಯವು 1 ಮತ್ತು 2ನೇ ಆರೋಪಿಗಳಿಗೆ ಕಲಂ 498 (ಎ) ಐಪಿಸಿಗೆ ಒಂದು ವರ್ಷ ಮತ್ತು 206 ಐಪಿಸಿಗೆ 5 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿದ್ದು, ಎರಡೂ ಶಿಕ್ಷೆಗಳನ್ನು ಒಟ್ಟಾಗಿ ಅನುಭವಿಸಲು ಆದೇಶಿಸಿದೆ.
ಬೆಂಗಳೂರು ನಗರ ಹನುಮಂತ ನಗರ ಪೋ. ಠಾಣೆ 101:90 ಕಲಂ 304 (ಬಿ) ಐಪಿಸಿ.	ಈ ಪ್ರಕರಣವು ಶ್ರೀಮತಿ ಉಮಾದೇವಿ ಎಂಬುವವರ ವರದಕ್ಷಿಣೆ ಸಾವಿಗೆ ಸಂಬಂಧಿಸಿ ದ್ದಾಗಿರುತ್ತದೆ.	ಶ್ರೀಮತಿ ಉಮಾದೇವಿ ನೇಣು ಹಾಕಿಕೊಂಡು	1. ರವಿಕುಮಾರ್ ಗಂಡ 2. ವಾಸುದೇವನ್ ಭಾವ 3. ಶ್ಯಾಮಲ ಅತ್ತೆ	ಶ್ರೀ ಹಲಗೂರು ಮೃತಳ ತಂದೆ	ಆರೋಪಿಗಳಾದ 1,2 ಮತ್ತು 3ನೇಯವರಿಗೆ ನ್ಯಾಯಾಲಯವು ಅನುಕ್ರಮವಾಗಿ 5, 7 ಮತ್ತು 2 ವರ್ಷಗಳ ಕಠಿಣ ಶಕ್ಷೆಯನ್ನು ಕಲಂ 304 (ಬಿ) ಐಪಿಸಿ ಮತ್ತು ಕಲಂ 3, 4 ಡಿ.ಪಿ. ಆಕ್ಟ್ ಅಪರಾಧಕ್ಕೆ ಮಾನ್ಯ ಬೆಂಗಳೂರು 22ನೇ ನ್ಯಾಯಾಲಯವು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.

1	2	3	4	5	6	7
3	ಬೆಂಗಳೂರು ನಗರ ಹನುಮಂತ ನಗರ ಪೋ. ಠಾಣೆ 120:90, ಕಲಂ 304(ಬಿ) ಐಪಿಸಿ.	ಈ ಪ್ರಕರಣವು ಶ್ರೀಮತಿ ಗಾಯಿತ್ರಿ ಎಂಬುವವರ ವರದಕ್ಷಿಣೆ ಸಾವಿಗೆ ಸಂಬಂಧಿಸಿದ್ದಾಗಿರುತ್ತದೆ	ಶ್ರೀಮತಿ ಗಾಯತ್ರಿ 24.4.90, ಸುಟ್ಟು ಗಾಯಗಳಿಂದ	1. ಉಮಾ ಕಾಂತ ಗಂಡ 2. ರವಿ ಮೈದುನ 3. ಸರೋಜಮ್ಮ 4. ಭಾಗ್ಯಮ್ಮ	ಟಿ.ಜಿ. ನಂಜುಂಡಪ್ಪ, ಮೃತಳ ತಂದೆ.	1ನೇ ಆರೋಪಿಗೆ ಕಲಂ 3 ಡಿ.ಪಿ. ಆಕ್ಟ್‌ಗೆ 5 ವರ್ಷ ಕಠಿಣ ಶಿಕ್ಷೆ, ಮತ್ತು ಹತ್ತು ಸಾವಿರ ರೂ.ಗಳ ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ ಮತ್ತೆ 6 ತಿಂಗಳ ಸಿಕ್ಷೆ ಹಾಗೂ 2ನೇ ಆರೋಪಿಗೆ 3 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತದೆ. ಆರೋಪಿ 3, 4 ನೇಯವರಿಗೆ ಖುಲಾಸೆ ಮಾಡಲಾಗಿದೆ. ಮತ್ತು ಈ ಆದೇಶವನ್ನು 22ನೇ ಬೆಂಗಳೂರು ಸತ್ರ ನ್ಯಾಯಾಲಯವು ನೀಡಿರುತ್ತದೆ.
4	ಬೆಂಗಳೂರು ನಗರ ತಿಲಕನಗರ ಪೋ. ಠಾಣೆ 113:90 304 (ಬಿ) ಐಪಿಸಿ.	ಈ ಪ್ರಕರಣವು ಶ್ರೀಮತಿ ಸಾಕಮ್ಮ ಎಂಬುವವರ ವರದಕ್ಷಿಣೆ ಸಾವಿಗೆ ಸಂಬಂಧಿಸಿದ್ದಾಗಿರುತ್ತದೆ.	ಶ್ರೀಮತಿ ಸಾಕಮ್ಮ 12-3-1990 ವಿಷ ಸೇವಿಸಿ.	1. ಶಿವಕುಮಾರ ಗಂಡ	ಶ್ರೀಮತಿ ಸಾಕಮ್ಮ (ಮೃತಳು)	ಆರೋಪಿಗೆ ಕಲಂ 396 ಐಪಿಸಿಗೆ 5 ವರ್ಷ ಕಠಿಣ ಶಿಕ್ಷೆ, ಕಲಂ 490 (ಎ) ಗೆ 2 ವರ್ಷ, ಕಲಂ 3 ಡಿ.ಪಿ. ಆಕ್ಟ್ 1 ವರ್ಷ ಕಲಂ 4 ಡಿ.ಪಿ. ಆಕ್ಟ್ 1 ವರ್ಷ ಶಿಕ್ಷೆ ವಿಧಿಸಿ., ಬೆಂಗಳೂರು ನಗರದ 22ನೇ ಸತ್ರ ನ್ಯಾಯಾಲಯವು ಆದೇಶ ನೀಡಿರುತ್ತದೆ.